ರಾಜ್ಯದ ಅಂಗನವಾಡಿ ಮಕ್ಕಳಿಗೆ ಉಚಿತ ಹಾಲು ಸರಬರಾಜು ಮಾಡುವ ಬಗ್ಗೆ

4236 (4847) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ವಿವಿಧ ಅಂಗನವಾಡಿಗಳಲ್ಲಿರತಕ್ಕ ಮಕ್ಕಳ ಸಂಖ್ಯೆ ಎಷ್ಟು;

ಆ) ರಾಜ್ಯದಲ್ಲಿ ಹಾಲಿನ ಉತ್ಪಾದನೆ ಅಧಿಕವಾಗಿದ್ದು, ಈ ಅಂಗನವಾಡಿ ಮಕ್ಕಳಿಗೆ ಉಚಿತ ಹಾಲನ್ನು ಸರಬರಾಜು ಮಾಡಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) 27.17 ಲಕ್ಷ

ಆ) ಹಂತಹಂತವಾಗಿ ಅಂಗನವಾಡಿ ಮಕ್ಕಳಿಗೆ ಉಚಿತ ಹಾಲನ್ನು ಸರಬರಾಜು ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಬೆಂಗಳೂರು ನಗರದಲ್ಲಿ ಸ್ತ್ರೀಶಕ್ತಿ ಯೋಜನೆ ಜಾರಿಗೊಳಿಸುವುದರ ಬಗ್ಗೆ

4237 (4853) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರ ಪ್ರದೇಶಗಳಲ್ಲಿರುವ ಕಡು ಬಡ ಮಹಿಳೆಯರವನ್ನು ಆರ್ಥಿಕವಾಗಿ ಬಲಪಡಿಸಲು ಸ್ತ್ರೀಶಕ್ತಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಬೆಂಗಳೂರು ನಗರದಲ್ಲಿ ಎಷ್ಟು ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲಾಗಿದೆ.

ಇ) ಇದಕ್ಕಾಗಿ ಸರ್ಕಾರ ಖರ್ಚು ಮಾಡುವ ಹಣವೆಷ್ಟು? ವಿವರ ಒದಗಿಸುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಇಲ್ಲ. ಆದಾಗ್ಯೂ ನಗರಾಭಿವೃದ್ಧಿ ಇಲಾಖೆಯು ನಗರ ಪ್ರದೇಸಗಳಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ಪ್ರಾರಂಭಿಸುವುದನ್ನು ಪರಿಶೀಲಿಸುತ್ತಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಳಗಾವಿ ಜಿಲ್ಲೆಯಲ್ಲಿ ಗೋದಾಮು ಕಛೇರಿ ಕಟ್ಟಡ ನಿರ್ಮಾಣದ ಬಗ್ಗೆ

4238 (4899) : ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಕಾಡಾ ಕಚೇರಿಯಿಂದ ಈ ವರ್ಷ ರೈತರಿಗೆ ಮಾಲು ಸಂಗ್ರಹಣೆ ಮಡಲು ಎಷ್ಟು ಗೋದಾಮು ಕಂ–ಕಚೇರಿಗಳನ್ನು ಕಟ್ಟಲು ಉದ್ದೇಶಿಸಲಾಗಿದೆ?

ಆ) ಕಳೆದ ವರ್ಷ ಹಾಗೂ ಈ ವರ್ಷ ಎಷ್ಟು ಗೋದಾಮು–ಕಂ–ಕಚೇರಿ ಗಳನ್ನು ಕಟ್ಟಲಾಗಿದೆ; ಹಾಗೂ ಯವ ಯಾವ ಸ್ಥಳಗಳಲ್ಲಿ ಕಟ್ಟಲಾಗಿದೆ?

ಇ) ಬೈಲಹೊಂಗಲ ತಾಲ್ಲೂಕಿನ ಅನಿಗೋಳ ಗ್ರಾಮದಲ್ಲಿ ಗೋದಾಮು–ಕಂ–ಕಚೇರಿ ಕಟ್ಟಲು ಪ್ರಸ್ತಾವನೆ ಕಳುಹಿಸಿದ್ದರೂ ಕೂಡಾ ಇದುವರೆಗೂ ಮಂಜೂರಾತಿ ನೀಡದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಗೋದಾಮು–ಕಂ–ಕಚೇರಿಗಳನ್ನು ಕಟ್ಟುವ ಕೆಲಸ ಬಹಳ ವಿಳಂಬವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ವಿಳಂಬವಾಗಲು ಕಾರಣಗಳೇನು?

ಉ) ಹಾಗಿದ್ದಲ್ಲಿ ಗೋದಾಮು–ಕಂ–ಕಚೇರಿಗಳನ್ನು ತ್ವರಿತವಾಗಿ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಬೆಳಗಾವಿ ಕಾಡಾ ಕಚೇರಿಯಿಂದ ಈ ವರ್ಷ ಅಂದರೆ 2003–04 ನಲ್ಲಿ ಒದಗಿಸಲಾದ ರೂ. 10.00 ಲಕ್ಷಗಳ ಅನುದಾನದಲ್ಲಿ ಎರಡು ಗೋದಾಮು ಕಂ–ಕಚೇರಿ ಕಟ್ಟಡಗಳನ್ನು ನಿರ್ಮಿಸಲು ಹಾಗೂ ಕಳೆದ ವರ್ಷದಲ್ಲಿ ಮಂಜೂರಾತಿ ಮಾಡಿ ನಿರ್ಮಾಣ ಹಂತದಲ್ಲಿರುವ ಮೂರು ಗೋದಾಮುಗಳನ್ನು ಸಹ ಪೂರ್ಣಗೊಳಿಸುವ ಉದ್ದೇಶವಿರುತ್ತದೆ. ಜೊತೆಗೆ ಲಚ್ಚುಕಟ್ಟು ಪ್ರದೇಶದಲ್ಲಿ ಜಲ ಸಂಪನ್ಮೂಲ ಇಲಾಖೆಯ ವಶದಲ್ಲಿರುವ ನಿರುಪಯುಕ್ತ ಕಟ್ಟಡಗಳನ್ನು ಸಂಬಂಧಿಸಿದ ನೀರು ಬಳಕೆದಾರರ ಸಹಕಾರ ಸಂಘಗಳ ಕಛೇರಿ–ಕಂ–ಗೋಡಾನ್‌ಗಳನ್ನಾಗಿ ಪರಿವರ್ತಿಸಲು ನಿರ್ಧರಿಸಲಾಗಿದೆ.

ಆ) ಕಳೆದ ವರ್ಷ ತೆಗೆದುಕೊಂಡ ನಿರ್ಮಾಣ ಹಂತದಲ್ಲಿರುವ ಮೂರು ಗೋದಾಮು–ಕಂ–ಕಚೇರಿ ಕಟ್ಟಡಗಳ ವಿವರ ಈ ಕೆಳಕಂಡಂತಿವೆ.

ಕ್ರ. ಸಂ.	ಸಂಘದ ಹೆಸರು	ಸ್ಥಳ
1.	ನೀಬಸಸಂ ನಿ., ಕಲಹಾಳ	ಕಲಹಾಳ
2.	ಮಲಪ್ರಭಾ ನೀಬಸಸಂ ನಿ., ಚಿಕ್ಕೋಪ್ಪ ಎಸ್.ಕೆ.	ಚಿಕ್ಕೋಪ್ಪ
3.	ನೀಬಸಸಂ ನಿ., ಮುಳ್ಳೂರ	ಮುಳ್ಳೂರ

ಪ್ರಸ್ತುತ ವರ್ಷದಲ್ಲಿ ಅಂದರೆ 2003–04 ನೇ ಸಾಲಿನಲ್ಲಿ 2 ಗೋದಾಮು–ಕಂ–ಕಚೇರಿ ಕಟ್ಟಡಗಳ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.

ಇ) ಬೈಲಹೊಂಗಲ ತಾಲ್ಲೂಕಿನ ಅನಿಗೋಳ ಗ್ರಾಮದ ಜಾಲಿಕೊಪ್ಪ ಏತ ನೀರಾವರಿ ನೀಬಸಸಂಘ ನಿ. ಅನಿಗೋಳ, ಇವರು ಗೋದಾಮು–ಕಂ–ಕಚೇರಿ ಕಟ್ಟಡ ಮಂಜೂರಾತಿ ಕೋರಿ ಪ್ರಸ್ತಾವನೆಯನ್ನು ದಿನಾಂಕ:19–4–2003 ರಂದು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆ ಪರಿಶೀಲಿಸಲಾಗಿ ನೀಲನಕ್ಷೆ ಹಗೂ ಅಂದಾಜು ಪತ್ರಿಕೆಗೆ ಕಾರ್ಯನಿರ್ವಾಹಕ ಅಭಿಯಂತರು ಕನೀನಿನಿ ನವಿಲುತೀರ್ಥ ಇವರ ತಾಂತ್ರಿಕ ಶಿಫಾರಸ್ಸು ಇಲ್ಲದೇ ಇರುವುದರಿಂದ ಅದನ್ನು ಸರಿಪಡಿಸಲು ಕೋರಿದ್ದು, ಪರಿಷ್ಕೃತ ಪ್ರಸ್ತಾವನೆ ಬಂದ ನಂತರ ಕ್ರಮ ಜರುಗಿಸಲಾಗುವುದು.

ಈ) ಈ ಕಾರ್ಯಕ್ರಮಕ್ಕೆ ಒದಗಿಸಲಾಗುತ್ತಿರುವ ಅನುದಾನದ ಆಧಾರದ ಮೇಲೆ ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದು, ಯಾವುದೇ ವಿಳಂಬಕ್ಕೆ ಅವಕಾಶವಿರುವುದಿಲ್ಲ.

ಉ) ಈ ಕುರಿತು ಬಂದಿರುವ ಹೆಚ್ಚಿನ ಬೇಡಿಕೆಗಳನ್ನು ಪೂರೈಸಲು ಹೆಚ್ಚುವರಿ ಅನುದಾನವನ್ನು ಒದಗಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.